# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.

## ಪಿ ಸಿ ಆರ್. ಸಂಖ್ಯೆ 95/2025

ದಿನಾಂಕಃ 07-05-2026 ರಂದು ಫಿರ್ಯಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಃ ಪಿರ್ಯಾದಿಯ ಪ್ರಮಾಣೀಕೃತ ಹೇಳಿಕೆ ಃ

ನಾನು ಈ ಪ್ರಕರಣದಲ್ಲಿ ಫಿರ್ಯಾದುದಾರನಾಗಿದ್ದು, ನನ್ನ ಸ್ವಪ್ರಮಾಣಿತ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ ಹಾಗೂ ನಾನೇ ಸಹಿ ಹಾಕಿದ್ದೇನೆ.

ಆರೋಪಿ ನೀಡಿದ ಮೂಲ ಚೆಕನ್ನು ನಿಪಿ-1 ಎಂದು, ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು, ಬ್ಯಾಂಕ್ ನವರು ನೀಡಿದ ಹಿಂಬರಹವನ್ನು ನಿಪಿ-2 ಎಂದು, ನನ್ನ ವಕೀಲರ ಮೂಲಕ ಆರೋಪಿಗೆ ನೀಡಿದ ನೋಟಿಸ್‌ನ ಕಚೇರಿ ಪ್ರತಿಯನ್ನು ನಿಪಿ-3 ಎಂದು, ಅದನ್ನು ಕಳುಹಿಸಿದ ಬಗ್ಗೆ ಎರಡು ಅಂಚೆ ರಶೀದಿಗಳು ನಿಪಿ-4 ಮತ್ತು 5 ಎಂದು, ಒಂದು ಅಂಚೇ ಸ್ವೀಕೃತಿ ಪತ್ರವನ್ನು ನಿಪಿ-6, ವಾಪಸ್ಸಾದ ಅಂಚೆ ಕವರನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ.7 ನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರ ಒಳಗಿರುವ ನೋಟಿಸನ್ನು ನಿಪಿ.7(ಎ) ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**.

ಓ.ಹೇ.ಕೇ.ಸ.ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ.,ಹುಣಸೂರು.